ಬೀಳುತ್ತ ಬೆಳ್ಳಂಬೆಳಿಗ್ಗೆ ಎಂಟಕ್ಕೆ ಮನೆ ಬಿಟ್ಟವರು ಶಾಲೆ ತಲುಪುವಾಗ ಘಂಟೆ ಹತ್ತಾಗಿ ಮೊದಲನೆಯ ಬೆಲ್ ಹೊಡೆದಿರುತ್ತಿತ್ತು .

ಮಲೆನಾಡಿನ ಮಳೆಯೇ ಅಂತಹುದು, ಕೂತ ಕಾಗೆ ಹಾರದಷ್ಟು, ಹಗಲು ರಾತ್ರಿಗಳನ್ನು ಒಂದಾಗಿಸಿ ಅವುಗಳ ವ್ಯತ್ಯಾಸಗಳನ್ನು ಗುರುತಿಸಲಾಗದಷ್ಟು. ಮೇ ತಿಂಗಳ ಎರಡನೆಯ ವಾರದಲ್ಲಿ ಶುರುವಾದ ಮುಂಗಾರಿನ ಗುಡುಗು ಸಿಡಿಲುಗಳ ಆರ್ಭಟ ಜೂನ್ ಮೊದಲ ವಾರಕ್ಕೆ ಕಡಿಮೆಯಾಗಿ ಮುಂದಿನ ಮೂರು ತಿಂಗಳುಗಳ ಕಾಲ  ಸತತವಾಗಿ ಕಾಡುವ ಮಳೆರಾಯ ಶಾಲಾ ಮಕ್ಕಳ ದೃಷ್ಟಿಯಲ್ಲಿ ಅಕ್ಷರಶಃ ನಕ್ಷತ್ರಿಕನೇ. ಕಾರಣ ಕೈಯಲ್ಲಿ ಚೀಲ, ಮಧ್ಯಾಹ್ನದ ಊಟದ ಉಗ್ಗದ ಜೊತೆಗೆ ಬೀಸುವ ಗಾಳಿ ಮಳೆಗೆ ಅಭಿಮುಖವಾಗಿ ಕೊಡೆ ಹಿಡಿದು ಮಳೆಯಿಂದ ನಮ್ಮನ್ನು ಅದರಲ್ಲೂ ಮುಖ್ಯವಾಗಿ ಪುಸ್ತಕದ ಚೀಲವನ್ನು ರಕ್ಷಿಸುಕೊಳ್ಳುವುದು ಹರಸಾಹಸವೇ ಸರಿ.

ಈ ಮಧ್ಯೆ ನಾವ್ಯಾರೂ ಮನೆಯಿಂದ ಶಾಲೆಗೆ ಅಥವಾ ಶಾಲೆಯಿಂದ ಮನೆಗೆ ಸೀದಾ ಹೊಗಿ ಬಂದವರಲ್ಲ. ಕಾರಣ  ದಾರಿಯುದ್ದಕ್ಕೂ  ಹೂವು ಹಣ್ಣುಗಳಿಂದ ಸಮೃದ್ಧವಾಗಿ ಹಸಿರು ಸೀರೆಯಲ್ಲಿ ಅಲಂಕೃತಗೊಂಡ ಪ್ರಕೃತಿ. ಯಾವ ಯಾವ ಋತುವಿನಲ್ಲಿ ಯಾವ ಯಾವ ಹೂವು ಹಣ್ಣುಗಳಿಂದ ಮರ ಗಿಡಗಳು ತುಂಬಿರುತ್ತವೆ ಎಂಬುದು ಹಾಗೂ ಅಂತಹ ಮರ ಗಿಡಗಳು ಕಾಡಿನ ಯಾವ ಯಾವ  ದಿಕ್ಕುಗಳಲ್ಲಿ ಸಿಗುತ್ತವೆಯೆಂಬುದೂ ಎಲ್ಲ  ಮಕ್ಕಳಿಗೂ ಆಗಿರುವ ಬಾಯಿಪಾಠ. ಅಂತೆಯೇ ಮುಖ್ಯವಾಗಿ ಶಾಲೆಯಿಂದ ಬರುವಾಗ ಜಿಟಿ ಜಿಟಿಯ ಸೋನೆ ಮಳೆಯಿಂದ ಪಾಚಿ ಕಟ್ಟಿ ಜಾರುತ್ತಿದ್ದ ಮರ ಗಿಡಗಳನ್ನು ಹತ್ತಿಯೋ ಅಥವಾ ಹತ್ತಲಾಗದ್ದಿದ್ದರೆ ಕೆಳಗಿನಿಂದಲೇ ಗಿಡ್ಡನೆಯ ಕಟ್ಟಿಗೆಯ ಬಡಚಿಕೆಯಿಂದ ಅವುಗಳನ್ನು ಕೆಡಗಿ, ಬಿದ್ದಾಗ ಆಗುವ ಮಣ್ಣಿನ ಕೆಸರನ್ನು ಅಂಗಿಯ ತುದಿಯಿಂದ ಒರಸಿ ಹಣ್ಣುಗಳನ್ನು ಸವಿಯುವ ಖುಷಿ ಶಬ್ದಗಳನ್ನು ಮೀರಿದ್ದು.

ಈ ಮಧ್ಯೆ ಶಾಲೆಗೆ ಹೋಗಿ ಬರುವಷ್ಟರಲ್ಲಿ ದನ ಕರುಗಳಿಂದ ರಕ್ಷಿಸಿಕೊಳ್ಳಲು ಬೆಳಿಗ್ಗೆ ಹೋಗುವಾಗಿನ ದಾರಿಗೆ ಕೃಷಿಕರು ಮಳೆಗಾಲದ ಮಟ್ಟಿಗೆ ತಾತ್ಕಾಲಿಕ ಬೇಲಿ ಹಾಕಿಕೊಂಡಿರುತ್ತಿದ್ದರು. ನಾವು ಅವರಿಗೆ ಗೊತ್ತಾಗದಂತೆ ಆ ಬೇಲಿಯಲ್ಲಿಯೇ ಒಂದು ಕಳ್ಳಗಿಂಡಿಯನ್ನು ಸೃಷ್ಟಿಸಿ, ಬೇಲಿಯನ್ನು ದಾಟಿ ಮತ್ತೆ ಬೇಲಿಯನ್ನು ಕಷ್ಟಪಟ್ಟು ಮೊದಲನೆಯ ಸ್ಥಿತಿಗೆ ತಂದರೂ ಕೃಷಿಕರಿಗೆ ಗೊತ್ತಾಗಿ ಅವರಿಂದ ಬೈಸಿಕೊಂಡು ಮನೆ ಸೇರುತ್ತಿದ್ದೆವು.

ಮರುದಿವಸದಿಂದ ಮತ್ತೆ ಹೊಸ ದಾರಿ, ಹೊಸ ಮರ, ಹೊಸ ಹಣ್ಣು ಕಾಯಿ. ಜೊತೆಗೆ ಆಗಷ್ಟೇ ಬೆಳೆಯುತ್ತಿದ್ದ ಹಸಿರು ಹುಲ್ಲಿನ ಮೇಲೆ ಮೇಲ್ನೋಟಕ್ಕೆ ಗೊತ್ತಾಗದಷ್ಟು ಸೂಕ್ಷವಾಗಿ ಸಾಗುವ ಒಂದು ರೀತಿಯ ನುಣುಪಾದ ಕೆಂಪು ಬಣ್ಣದ ರೇಷ್ಮೆ ಹುಳುಗಳು. ಮೇಲೆ ಮತ್ತಿಯ ಮೇಲೆ ತನ್ನನ್ನು ತಾನು ಅಲಂಕರಿಸಿಕೊಂಡಿರುವ ರೀತಿಯಲ್ಲಿ ಜೋತಾಡುವ ಸೀತಾಳೆ ಹೂವಿನ ದಂಡೆಗಳು. ಈ ಮಧ್ಯೆ  ದೂರದಲ್ಲೆಲ್ಲೋ ಗದ್ದೆಯಲ್ಲಿ ಬಿತ್ತಿದ ಬತ್ತ ಮೊಳಕೆಯೊಡೆಯುವ ಮೊದಲೇ ತಿಂದು ಹಾರುವ ಹಕ್ಕಿಗಳ ಹಿಂಡನ್ನು ಡಬ್ಬವನ್ನು ಬಡಿದು ಓಡಿಸುವ ರೈತನ ಕೂಗು. ಮಧ್ಯೆ ಮಧ್ಯೆ ಮೋಡದ ಮರೆಯಿಂದ ಆಗಾಗ ಇಣುಕಿ ತನ್ನ ಇರುವನ್ನು ನೆನಪಿಸುವ ಸೂರ್ಯ.

ಇವೆಲ್ಲ ಇಂದು ನೆನಪುಗಳು. ಕಾಲನ ಪ್ರಭಾವದಿಂದ ಇಂದು ಹಳೆಯದನ್ನು ಅನುಭವಿಸುವ ಮಾತಿರಲಿ, ನೆನಪಿನ ಭಂಡಾರದಿಂದ ಹುಡುಕಿ ತೆಗೆಯುವುದೂ ಕಷ್ಟ. ಇಂದು ಮಳೆರಾಯನ ಆಗಮನ ಅನಿಶ್ಚಿತ. ಆಗೆಲ್ಲ ಮೂರು ತಿಂಗಳಗಳ ಕಾಲ ಸುರಿಯುತ್ತಿದ್ದ  ವರ್ಷಧಾರೆ ಈಗ ಕೇವಲ ಪುಸ್ತಕಕ್ಕಷ್ಟೇ ಸೀಮಿತ. ಹಳ್ಳಿಗಳಲ್ಲೂ  ಈಗ ಮಕ್ಕಳ ಸಂಖ್ಯೆ ಕಡಿಮೆಯಾಗಿದ್ದು ಊರಿಗೊಂದು ಶಾಲೆಯಿಂದಾಗಿ ಮಕ್ಕಳು ಕಾಡು ಮೇಡುಗಳನ್ನು ಸುತ್ತಿ ಶಾಲೆಗೆ ಹೋಗುವ ಖುಷಿಯಿಂದ ವಂಚಿತರು. ಹಾಗೆಯೇ ಅದು ಕೊಡುವ ಅನುಭವದಿಂದಲೂ ಕೂಡಾ. ■


